7. ಬಾಗೇಪಲ್ಲಿ ತಾಲ್ಲೂಕು ಗೂಳೂರು ದೊಡ್ಡಕೆರೆ ಕಟ್ಟೆ ಅಗಲಪಡಿಸುವದಕ್ಕೆ ಮುಂಣು ಕಾಂಗಾರಿ ಪೈಕಿ ಕೊಂಚ ಮೊಬಲಗು, ಅದರಮೇಲೆ ಡಿ॥ ಫಂಡು ರಸ್ತೆ ಹೋಗುವದರಿಂದ, ಡಿ॥ ಫಂಡಿನಿಂದ ಕೊಡಬೇಕಾಗುತ್ತೆ. ಇದಕ್ಕೆ ಬೋರ್ಡಿನವರು ಒಪ್ಪುತ್ತಾರೆಯೇ ಎಂದು ವಗ್ಗೈರೆ ಎಗ್ಜಿಕ್ಯೂಟಿವ್ ಇಂಜನಿಯರ್ ಸಾಹೇಬರವರಿಂದ ತಲಪಿದ 18—5—04ನೆ ಮು॥ 272ನೆ ನಂ. ಡಾಕೆಟ್ ಓದಲಾಯಿತು.

ತೀರ್ಮಾನ:—ಬೋರ್ಡಿನವರು ಈ ಕೆರೆ ಕಟ್ಟೆಯನ್ನು ಅಗಲಪಡಿಸುವದಕ್ಕಾಗಿ 1,000 ರೂಪಾಯಿಗೆ ಮಿಾರದಂತೆ ಕೊಡುವದಾಗಿ ಒಪ್ಪಿರುತ್ತಾರೆ.

8. ಬರುವ ದಸರಾ ಅಸೆಂಬ್ಲಿಗೆ ಡಿ॥ ಬೋರ್ಡು ನಾ॥ ಅಫಿಷಿಯಲ್ ಮೆಂಬರುಗಳ ಪೈಕಿ ಇಬ್ಬರನ್ನು ಚುನಾಯಿಸಬೇಕೆಂದು ಹ॥ ಡಿ॥ ಕ॥ ಸಾಹೇಬರವರ 7—6—04ನೆ ಮು॥ 5677—4653ನೆ ನಂ. ಡಾಕೆಟ್ ಓದಲಾಯಿತು.

ತೀರ್ಮಾನ:—1904ನೆ ಇಸವಿ ದಸರಾ ಅಸೆಂಬ್ಲಿಗೆ ಹೋಗಲು ಮು॥ ಶ್ರೀ॥ ಪಿ. ಶ್ರೀನಿವಾಸಾಚಾರ್ಯರವರು, ಮು॥ ಶ್ರೀ॥ ಕ. ಉ ವ್ಯಂಕಣ್ಣಯ್ಯನವರು ಚುನಾಯಿಸಲ್ಪಟ್ಟರು.

9. ಶ್ರೀನಿವಾಸಪುರ ತಾಲ್ಲೂಕು ರಾಯಲ್‌ಪಾಡು ವಗ್ಗೈರೆ ಗ್ರಾಮಗಳಲ್ಲಿ ಜನಗಳ ಉಪಯೋಗಾರ್ಥವಾಗಿ ಒಬ್ಬ ನೇಟಿವ್ ವೈದ್ಯನನ್ನು ವೊಕರರು ಆಗಬೇಕೆಂದು ಮು॥ ಶ್ರೀ॥ ಕ. ವೆಂಕಟಸಾಮಿ ರಡ್ಡಿಯವರಿಂದ ಪ್ರೊಪೋಜು ಮಾಡಲ್ಪಟ್ಟಿತು ಮು॥ಶ್ರೀ॥ ಮುರನನಪಲ್ಲಿ ಚಿನ್ನಪ್ಪನವರಿಂದ ಸೆಕಂಡು ಮಾಡಲ್ಪಟ್ಟಿತು.

ಸಭೆಯವರೆಲ್ಲಾ ಏಕಮನಸ್ಕರಾಗಿ ಶ್ರೀನಿವಾಸಪುರಕ್ಕೆ ದೂರವಾಗಿರುವ ಉತ್ತರಭಾಗದಲ್ಲಿರತಕ್ಕ ಗ್ರಾಮಗಳಲ್ಲಿ ಕಾಮಿಲೆ ಜನಗಳನ್ನು ನೋಡಿಕೊಳ್ಳುವದಕ್ಕೋಸ್ಕರ ರಾಯಲ್ಪಾಡಿನಲ್ಲಿ ಒಬ್ಬ ನೇಟಿವ್ ವೈದ್ಯನನ್ನು ಇಡಬಹುದೆಂದು ತೀರ್ಮಾನಿಸಿದರು.

10. ಕೋಲಾರ ಡಿ॥ ಬೋರ್ಡು ಫೈನಾನ್ಸು ಕಮ್ಮಿಟಿಯವರು 22—5—04ನೆ ಮು॥ ಸಭೆ ಸೇರಿ ನಡಿಸಿದ ತೀರ್ಮಾನವನ್ನು ಮತ್ತು ಅವರಿಂದ ಮಾಡಲ್ಪಟ್ಟ 1904—05ನೆ ಸಾಲಿನ ಡಿ॥ ಬೋರ್ಡು ಬಜ್ಜೆಟ್ಟು ಓದಲಾಯಿತು.

ತೀರ್ಮಾನ:—ಫೈನಾನ್ಸು ಕಮ್ಮಿಟಿಯವರಿಂದ ಮಾಡಲ್ಪಟ್ಟ ಬಜ್ಜೆಟ್ಟು ಅಂದಾಜುಗಳು ಒಪ್ಪಿಕೊಳ್ಳಲ್ಪಟ್ಟಿತು. ಅದರಲ್ಲಿ ರಾಯಲ್ಪಾಡಿನಲ್ಲಿ ಹೊಸದಾಗಿ ವೊಕರೂರು ಆಗಬೇಕೆಂದು ತೀರ್ಮಾನವಾಗಿರುವ ನೇಟಿವ್ ವೈದ್ಯನ ವೇತನ ಮತ್ತು ಸಾದಿಲ್ವಾರ್ ಮಾಹೇಯಾನಾ 15 ರೂಪಾಯಿನಂತೆ ಶೇರಿಸಬೇಕೆಂದು ತೀರ್ಮಾನವಾಗಿ ಅದರಂತೆಯೇ ಶೇರಿಸಲ್ಪಟ್ಟಿತು.

1904 - 05ನೆ ಸಾಲಿಗೆ ಅಂದಾಜಾದ ಜಮಾಖರ್ಚು ವಿವರ:—

			ರೂ. ಆ. ಪೈ.
1904—05ನೆ ಸಾಲಿನ ಪುರುನಲ್ಲಿ ಇರಬಹುದಾದ ಬಾಕಿ	..	..	20,761—0—0
1904—05ನೆ ಸಾಲಿಗೆ ಜಮಾ ಆಗಬಹುದಾದ ಅಂದಾಜು	..	..	80,819—0—0
		ಜುಮ್ಲಾ ...	1,01,580—0—0
ಡಿಟೋ ಸಾಲಿಗೆ ಖರ್ಚು ಅಂದಾಜು			
A. ಇಂಜನಿಯರ್ ಇಲಾಖಾ ಮೂರೀಫತ್ತು ಕಾಂಗಾರಿ	..	45,461-0-0	86,078—0—0
B. ರೆವಿನ್ಯು ಇಲಾಖಾ ಡಿಟೋ	...	16,092-0-0	
C. ಸಿವಿಲ್ ಛಾರ್ಜು ...	...	24,525-0-0	
1904—05 ಸಾಲಾಖ್ಯೆರಿಗೆ ನಿಲ್ಲಬಹುದಾದ ಶಿಲ್ಕು	...	..	15,502—0—0

11. ಮಿಾಟಿಂಗು ಕ್ಲೋಜು ಮಾಡುವಾಗ್ಯೆ ಮುಂದಿನ ಮಿಾಟಿಂಗು 1904ನೆ ಇಸವಿ ಸೆಪ್ಟೆಂಬರು ತಾ॥ 17ನೆ ಶನಿವಾರ ದಿವಸ ನಡಿಯಬೇಕೆಂದು ತೀರ್ಮಾನವಾಯಿತು.

ಕೆ. ಪಿ. ಪುಟ್ಟಣ್ಣ ಚೆಟ್ಟಿ,
ಪ್ರೆಸಿಡೆಂಟ್.

ಮೈಸೂರು ಡಿಸ್ಟ್ರಿಕ್ಟ್.

ಇಸ್ತಿಹಾರ್ನಾಮಾ—ತಾರೀಖು 5ನೆ ಜುಲೈ 1904.

ಎಡತೊರೆ ತಾಲ್ಲೂಕಿಗೆ ಸೇರಿದ ಸರ್ವಮಾನ್ಯ ದಿಡ್ಡಹಳ್ಳಿ ಗ್ರಾಮವು ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ಎಡತೊರೆ ತಾಲ್ಲೂಕು ಅಮಲ್ದಾರ್‌ರವರ ಕಚೇರಿಯಲ್ಲಿ 1904ನೆ ಇಸವಿ ಆಗಸ್ಟು ಮಾಹೆ 20ನೆ ತಾರೀಖಿನ ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿ ಇಧೆ.

ಹೆಚ್ಚು ತಪಶೀಲ್ ಬಗ್ಗೆ ತಾರೀಖು 14—7—1904ನೆ ಮುಕ್ತುಂ 28ನೆ ನಂಬರ್ ಮೈಸೂರು ಗೆಜೆಟ್ಟಿನ 2ನೆ ಭಾಗದ 434ನೆ ನಂಬರು ಪೇಜು ನೋಡತಕ್ಕದ್ದು.

ಎಂ. ಕಾಂತರಾಜೆ ಅರಸ್,
ಅಫಿಷಿಯೇಟಿಂಗ್ ಡೆಪ್ಯುಟಿ ಕವಿಷನರ್.